ಅವರು ನನ್ನ ಬಗೆ ಏನು ಹೇಳಿದ್ದಾರೋ, ಬಿಟ್ಟಿದ್ದಾರೋ ನನಗೆ ಆಸಕ್ತಿ ಇರಲಿಲ್ಲ. ಆದರೆ ಅವರ ಬಗ್ಗೆ ನಾನು ಅಷ್ಟೊಂದು ಆಸಕ್ತಿ ತೋರಿಸಿದ್ದು ಅಮ್ಮನಿಗೂ, ಜ್ಯೋತಿಗೂ ಇಷ್ಟವಾಗದೆ ನನ್ನ ಮೇಲೆ ಹರಿಹಾಯ್ದರು. ಮರುದಿನ ಬೆಳಗ್ಗೆಯೇ ಆಸ್ಪತ್ರೆಯಿಂದ ಧರಣೇಂದ್ರಯ್ಯನವರು ವಿಧಿವಶರಾದ ಸುದ್ದಿ ಬಂದಿತು. ತಕ್ಷಣ ಆಸ್ಪತ್ರೆಗೆ ದೌಡಾಯಿಸಿದೆ. ಧರಣೇಂದ್ರಯ್ಯ ತಾವು ಸತ್ತರೆ ತಮ್ಮ ದೇಹವನ್ನು ನನಗೆ ಒಪ್ಪಿಸಬೇಕೆಂದು ವೈದ್ಯರಲ್ಲಿ ಕೋರಿಕೊಂಡಿದ್ದರಂತೆ. ಸ್ವತಃ ವೈದ್ಯರೇ ಹೀಗೆಂದು ಹೇಳಿದಾಗ ನನ್ನ ತಲೆ ತಿರುಗಿ ಕುಸಿದುಬೀಳುವಂತಾಯ್ತು. ಕೈ, ಕಾಲುಗಳು ಸಣ್ಣಗೆ ನಡುಗ ತೊಡಗಿದವು. ಯಾವುದು ಆಗಬಾರದು ಎಂದುಕೊಂಡಿದ್ದೆನೋ ಅದೇ ಆಗಿ ಹೋಯಿತು. ಅಮ್ಮ ಹಾಗೂ ಜ್ಯೋತಿಗೆ ಏನು ಉತ್ತರಿಸಬೇಕು? ಆಫೀಸಿಗೆ ಎಷ್ಟುದಿನ ರಜೆ ಹಾಕಬೇಕು? ಪ್ರಶ್ನೆಗಳು ಉದ್ಭವವಾಗತೊಡಗಿದಂತೆ ಮನೆಯವರಿಗೆ ಚರವಾಣಿಯಿಂದ ಕರೆಮಾಡಿ ವಿಷಯ ತಿಳಿಸಿದೆ. ಜ್ಯೋತಿ ಅಳತೊಡಗಿದಳು. ಅದು ಧರಣೇಂದ್ರಯ್ಯ ಮೃತರಾದದ್ದಕ್ಕಲ್ಲ. ಅವರ ಸಂಸ್ಕಾರ ಮಾಡಬೇಕಾಗಿ ಬಂತಲ್ಲ ಅಂತ! ಅಮ್ಮ ಅಂತೂ ನನ್ನ ಸಹಸ್ರ ನಾಮಾರ್ಚನೆ ಮಾಡತೊಡಗಿದಳು. ಅಂತ್ಯ ಸಂಸ್ಕಾರ ಮಾಡಿ ಮುಗಿಸಿದೆ. ಹತ್ತು ಸಾವಿರಕ್ಕೂ ಹೆಚ್ಚು ಹಣ ಕೈ ಬಿಟ್ಟು ಹೋಯಿತು. ಅಂತ್ಯ ಸಂಸ್ಕಾರದ ದಿನ ಮಾತ್ರ ವಕೀಲ ಹರೀಶ್ ಸಗಾಯ್ ಬಂದು ಏನೂ ಹೇಳದೆ ಹೊರಟುಹೋಗಿದ್ದರು.

ಅದಾಗಿ ಮೂರು ತಿಂಗಳು ಕಳೆದಿತ್ತು. ನಾನು ಕಚೇರಿಗೆ ಹೊರಡಲು ಸಿದ್ಧನಾಗುತ್ತಾ ಇದ್ದೆ. ಅಪರಿಚಿತನೊಬ್ಬ ಬಾಗಿಲ ಬಳಿ ಬಂದು, “ನಮಸ್ಕಾರ, ಸತೀಶ್‌ಚಂದ್ರ ನೀವೇನಾ?...” ಎಂದು ತುಂಬಾ ವಿನಯದಿಂದ ಹಿಂದಿಯಲ್ಲಿ ಮಾತನಾಡಿದ.

“ಹೌದು” ಎಂದು ತಲೆ ಆಡಿಸಿ, “ತಮ್ಮ ಪರಿಚಯವಾಗಲಿಲ್ಲ” ಎನ್ನುತ್ತಾ ಮನೆಯೊಳಗೆ ಕರೆದೊಯ್ದೆ.

ಬಂದ ವ್ಯಕ್ತಿ, “ನಾನು ವಿವೇಕ್ ಶೆಣೈ, ಲೀಗಲ್ ಅಡ್ವೈಸರ್, ಹರೀಶ್ ಸಗಾಯ್ ಅವರ ಅಸಿಸ್ಟಂಟ್” ಎಂದು ಪರಿಚಯಿಸಿಕೊಂಡ.

ಎಲ್ಲಾ ಮುಗಿಯಿತು ಎಂದು ನಿಟ್ಟುಸಿರು ಬಿಡುವಾಗ ವಕೀಲರು ಮತ್ತೇನೋ ಸಮಸ್ಯೆಯಲ್ಲಿ ಸಿಕ್ಕಿಸುತ್ತಿದ್ದಾರೆ ಎನಿಸಿ ಮೈ ಬಿಸಿಯಾಯಿತು. ತಾಳ್ಮೆ ತಪ್ಪತೊಡಗಿತು.

“ನಮ್ಮ ಧರಣೇಂದ್ರಯ್ಯನವರು...” ಅಂತ ಅವನು ಮಾತು ಆರಂಭಿಸುತ್ತಿದ್ದಂತೆ ನಾನು ಕೋಪದಿಂದ, “ನೋಡಿ ಇವ್ರೆ... ನನಗೂ ಆ ಮುದುಕನಿಗೂ ಏನೂ ಸಂಬಂಧವಿಲ್ಲ. ಏನೋ ನೆಂಟ ಅಂತ ಬಂದ್ರು. ಅತಿಥಿ ಅಂತ ನಾವೂ ಸತ್ಕರಿಸಿದೆವು ಅಷ್ಟೆ. ಪರಿಸ್ಥಿತಿಗೆ ಸಿಕ್ಕು ಅವರ ಅಂತ್ಯ ಸಂಸ್ಕಾರವನ್ನೂ ನಾನೇ ಮಾಡಬೇಕಾಗಿ ಬಂತು. ಅಷ್ಟಕ್ಕೇ ನೀವೆಲ್ಲಾ ಹೀಗೆ ಬಂದು ನನಗೆ ತೊಂದರೆ ಕೊಡಬೇಡಿ. ಸುಮ್ಮನೆ ಹೊರಟುಹೋಗಿ” ಎಂದು ನಾನು ಸ್ವಲ್ಪ ಜೋರಾಗಿಯೇ ಕೂಗಿದೆ. “ಹಾಗಲ್ಲ ಸಾರ್...” ಎಂದು ಆತ ಏನೋ ಹೇಳಲಿಕ್ಕೆ ಪ್ರಯತ್ನ ಪಟ್ಟ.

“ಹಾಗೂ ಇಲ್ಲ, ಹೀಗೂ ಇಲ್ಲ. ದಯವಿಟ್ಟು ಹೊರಟುಹೋಗಿ. ಇಲ್ಲಾಂದರೆ ಪೊಲೀಸರಿಗೆ ದೂರು ಕೊಡಬೇಕಾಗುತ್ತೆ” ಎಂದು ಮತ್ತೆ ಹೆಚ್ಚುಕಡಿಮೆ ಕಿರುಚಿದೆ.

ಆತನ ಮುಖ ಕಪ್ಪಿಟ್ಟಿತು. “ನೋಡಿ ಸ್ವಾಮಿ, ಹರೀಶ್ ಸಗಾಯ್ ಅವರು ಈ ಲಕೋಟೆಯನ್ನು ನಿಮಗೆ ತಲುಪಿಸಲಿಕ್ಕೆ ಹೇಳಿದ್ದರು. ಅಷ್ಟೆ. ಸರಿ ನಾನಿನ್ನು ಬರ್ತೇನೆ” ಎಂದು ಆತ ಲಕೋಟೆಯೊಂದನ್ನು ಟೀಪಾಯಿಯ ಮೇಲಿಟ್ಟು ಹೊರಟು ಹೋದ. ಆತ ಹೋದದ್ದನ್ನು ಖಚಿತ ಪಡಿಸಿಕೊಂಡು, ದೀರ್ಘ ನಿಟ್ಟುಸಿರೊಂದನ್ನು ಬಿಟ್ಟು ಖುರ್ಚಿಮೇಲೆ ಕುಳಿತೆ.